ಶ್ರೀ ಮಧ್ವರಾಯರ ಸೇವೆ ದೊರಕುವುದು
ಜನುಮ ಸಫಲ ಕಾಣಿರೋ||ಪ||

ಶ್ರೀಮದಾನಂದ ತೀರ್ಥರ ಪಾದವ ನೆನೆವರು
ಸಾಮಾನ್ಯ ಸುರರು ಕಾಣಿ ಬೊಮ್ಮನ ಆಣೆ|ಅ.ಪ|

ಜಗವು ಸತ್ಯವು ಅಲ್ಲ ಜಡ ಜೀವ ಭೇದವಲ್ಲ
ಅಗುಣನು ಪರಬೊಮ್ಮನು
ಹೀಗೆ ನುಡಿವ ಜನರ ನಿಗಮಶಾಸ್ತ್ರದಿ ಗೆದ್ದು
ಜಗಸತ್ಯ ಸಗುಣ ಬ್ರಹ್ಮ ಎಂದು ಪೇಳುವ|೧|

ಹರಿ ಸರ್ವೋತ್ತಮ ನಿತ್ಯ ತರುವಾಯ ರಮಾದೇವಿ
ತರುವಾಯ ವಿಧಿಪ್ರಾಣರು
ಸರಸ್ವತಿ ಭಾರತಿ ಗರುಡ ಅನಂತ ರುದ್ರ
ತರುವಾಯ ಆರು ದೇವಿಗಳು|೨|

ಸೌಪರ್ಣಿ ವಾರುಣಿದೇವಿ ಅಪರ್ಣಾದೇವಿಯರು ಸಮರು
ದ್ವಿಪದಿ ಮನ್ವಾದಿಗಳು
ಈ ಪರಿ ತಾರತಮ್ಯ ಜಪಧ್ಯಾನಾರ್ಚನೆಯಿಂದ
ಅಪವರ್ಗದನ ಸೇವೆಯ ಮಾಡಿರೊ ಎಂಬ|೩|

ಒಂದೊಂದು ಯುಗದಲಿಅನಂತ ಸೇವೆಯ ಮಾಡಿ
ಚೆಂದದಿಂದಲಿ ಲಾಲಿಸಿ
ಇಂದಿರಾರಮಣ ಗೋವಿಂದನೇ ದೈವವೆಂದು
ಸಂದೇಹವಿಲ್ಲದೆ ಸಾಧಿಸಿ ಮಾಯೀ ಸೋಲಿಸಿ|೪|

ಹಿಮಗಿರಿಯಿಂದ ಸೇತುವೆಯ ಪರ್ಯಂತರ
ಭ್ರಮಿಸುತ ಸುಜನರಿಗೆ
ಕ್ರಮತತ್ವ ಭೋದಿಸಿ ಕಮಲನಾಭನ ಮೂರ್ತಿ
ಕ್ರಮವರಿತು ಸ್ಥಾಪಿಸಿ ಪೂಜಿಸಿರೆಂದ|೫|

ಭೂತಳದೊಳು ರೌಪ್ಯಪುರದಿ ನೆಲಸಿ ಗೆದ್ದು
ಧಾತ್ರೀ ಮುದ್ರೆಯ ತೋರಿಸಿ
ಈತನೇ ಹನುಮಂತ ಈತನೇ ಭೀಮಸೇನ
ಈತನೇ ಭವಿಷ್ಯದ ಬ್ರಹ್ಮ ಜೀವೋತ್ತಮ|೬|

ಶ್ರೀಮದನಂತನೆ ಅನಂತಕಾಲಕೆಯೆಂದು
ಯಮಕ ಭಾರತ ತೋರಿಸಿ

ಸ್ವಾಮಿ ಸರ್ವಾಂತರ್ಯಾಮಿ ಸರ್ವಗುಣಪೂರ್ಣನೆಂದು
ಪ್ರೇಮಿ ಪುರಂದರವಿಠಲನ ದಾಸನಾದ|೬|

-----------

ಸೂತ್ರನಾಮಕ ಸುಂದರನೇಕ ಸೂತ್ರನಾಮಕ ||ಪ||

ಸೂತ್ರನಾಮಕ ಸತ್ಪಾತ್ರ ಗರಡ ಶಿಖಿ
ನೇತ್ರವಿನುತ ಶುಭಗಾತ್ರ ಪವಿತ್ರ|ಅ.ಪ|

ರಾಮಪದ ಭೃಂಗಾ ರಾವಣ ಮದಭಂಗ ಗಜಸಿಂಗಾ
ತಾಮಸ ಕುಲಕೆ ನೀ ಧೂಮಕೇತು ಬುಧ
ಸೌಮನಸಾಗ್ರಣಿ ಕಾಮಿತ ಫಲದಾ|೧|

ಪಾಂಡುನಂದನಾ ಪಾಲಿಸುಯನ್ನಾ ಖಂಡ ಪಾವನಾ
ಅಂಡಜಾಧಿಪ ಕಂಡು ಭಜಿಸಿ ದೋ
ರ್ದಂಡ ಖಳ ಕುಲ ಚಂಡ ಪ್ರಚಂಡಾ|೨|

ಜ್ಞಾನದಾಯಕಾ ಆನಂದತೀರ್ಥ ದೀನಪೋಷಕ
ಭಾನುಕೋಟಿ ತೇಜ ವ್ಯಾಸ ವಿಠಲನ
ಧ್ಯಾನದೊಳಿಹ ಮಮ ಮಾನಸ ಹಂಸಾ|೩|
-----------

ನೀನೇ ವರಗುರು ಮುಖ್ಯಪ್ರಾಣ ನಿರಂತರದಿ
ನಂಬಿದೆನೋ ನಿಖಿಲಗುಣಪೂರ್ಣ

ಜಾಣೆ ಕೋಮಲೆ ಭಾರತೀಶ ಸಕಲ
ಪ್ರಾಣಿಗಳ ಹೃದಯದಲಿ ವಾಸ ಸುರೇಶ

ವಾತಸುತನಾಗಿ ರಘುನಾಥ ಪ್ರಿಯದೂತ ಬಲು ಯೂಥ ಲಂಕೆಯ ಪೊಕ್ಕು ಖ್ಯಾತಿಯನು ಪಡೆದೆ
ಸೀತೆಗುಂಗುರ ಕೊಟ್ಟು ವೀತಿಹೋತ್ರಗೆ ಪುರವ ಪ್ರೀತೆನಿಸಿದಾತ ದಿತಿಜಾತರಿಗೆ ಭೀತಿಕರ

ಲಂಡ ಕೀಚಕನ ಬಕನ ಮಂಡೆಯನು ಒಡೆದು ಉದ್ದಂಡ ಮಗಧಾಧಿಪನ ದಂಡವನ್ನು ಸೀಳಿ
ಭಂಡ ಕೌರವನ ಶಿರ ಚೆಂಡಾಡಿ ಪ್ರಬಲರಣ ಮಂಡಳದಿ ಚಂದರಿಪುದಂಡಗಳ ಖಂಡ್ರಿಸಿದೆ

ಸಾಂಗದಲಿ ಮಧ್ವ ಮತದಂಗವನು ಏರ್ಪಡಿಸಿ ಕಂಗೆಟ್ಟ ಕುಮತಿ ದುಸ್ಸಂಗಗಳನಳಿದು
ಗಂಗೆ ಪಿತ ಶಿರಿ ಕೃಷ್ಣ ಪದ ಭೃಂಗ ಮೂರ್ಜಗದೊಳಗೆ ತುಂಗ ಭವಭಂಗ ದಯಾಪಾಂಗ ಯತಿಪುಂಗವನೆ
- ಶ್ರೀ ವ್ಯಾಸರಾಜರು
---------------------

ಎಂಥಾ ಬಲವಂತನೋ ಕುಂತಿಯ ಸಂಜಾತನೋ
ಭಾರತಿಗೆ ಕಾಂತನೋ ನಿತ್ಯ ಶ್ರೀಮಂತನೋ ||ಪ||

ರಾಮಚಂದ್ರನ ಪ್ರಾಣನೋ ಅಸುರಹೃದಯ ಬಾಣನೋ
ಖಳರ ಗಂಟಲ ಗಾಣನೋ ಜಗದೊಳಗೆ ಪ್ರವೀಣನೋ ||೧||

ಕುಂತಿಯ ಕಂದನೋ ಸೌಗಂಧಿಕವ ತಂದನೋ
ಕುರುಕ್ಷೇತ್ರಕೆ ಬಂದನೋ ಕೌರವರ ಕೊಂದನೋ ||೨||

ಭಂಡಿ ಅನ್ನವ ಉಂಡನೋ ಬಕನ ಪ್ರಾಣವ ಕೊಂದನೋ
ಭೀಮ ಪ್ರಚಂಡನೋ ದ್ರೌಪದಿಗೆ ಗಂಡನೋ ||೩||

ವೈಷ್ಣವ ಅಗ್ರಗಣ್ಯನೋ ಸಂಚಿತಾಗ್ರ ಪುಣ್ಯನೋ
ದೇವವರೇಣ್ಯನೋ ದೇವಶರಣ್ಯನೋ ||೪||

ಮಧ್ವಶಾಸ್ತ್ರವ ರಚಿಸಿದನೋ ಸದ್ವೈಷ್ಣವರ ಸಲಹಿದನೋ
ಉಡುಪಿ ಕೃಷ್ಣನ ನಿಲಿಸಿದನೋ ಪುರಂದರವಿಠಲನ ಒಲಿಸಿದನೋ ||೫||
--------------------------------------------
ಶರಣು ವಾಯು ತನುಜ ಶರಣು ಭಾಸ್ಕರ ತೇಜ
ಶರಣು ರಾಜಾಧಿರಾಜ ಶರಣು ಗೋಸಹಜ
ಶರಣಾರ ಸುರಭೋಜ ||ಪ||

ಸೂತ್ರನಾಮಕ ದೇವ ಸ್ತೋತ್ರ ಮಾಳ್ಪರ ಕಾವ
ಚಿತ್ರ ಮಹಿಮರ ಕಾವ ವಿಚಿತ್ರ ಶರೀರ ಸ
ತ್ಪಾತ್ರನೆ ಸುಮನಸದಲಿಗರಳ ಹೇಮ
ಪಾತ್ರಿಯೊಳಾಗೆ ಸವಿದು ಶ್ರೀಪತಿಯ ಶತ
ಪತ್ರ ಪಾದವ ಕಾಲತ್ರಯ ನೆನೆಸುವನೆ|೧|

ಜ್ಞಾನ ಭಕುತಿ ವೈರಾಗ್ಯ ನೀನೀಯೋ
ಇದೆ ಭಾಗ್ಯ ನಾನಾವದೂ ಒಲ್ಲೆ
ಆ ನಾಮದ ಸೊಲ್ಲೆ ಮೇಣು ಪಾಲಿಪುದು ಮುಖ್ಯ
ಪ್ರಾಣಪಾವನ ಲೀಲ ದಾನವರ ಕುಲಕಾಲ
ಏನೇನು ಮಾಳ್ಪಾಧಿಷ್ಠಾನದಲಿ
ನೀನೇ ನಾನೆಲ್ಲಿ ಎಣೆಗಾಣೆ|೨|

ವಂದಿಸುವೆ ಜಗದ್ಗುರುವೆ ಎಂದು ನಿನ್ನನೆ ಕರೆವೆ
ಮುಂದೆ ಈ ಜನ್ಮವು ಹಿಂದೆ ಮಾಡಿ ನೇಮವು
ಪೊಂದಿಸು ಮೇಲುಗತಿ ತಂದೆ ತಾಯಿ ಮಿಕ್ಕ
ಬಂಧು ಬಳಗನೇಕ ಅಂದವೆಲ್ಲವು ನಿತ್ಯ

ವೆಂದೆ ಬಂದೆ ಸತ್ಯ ಕುಂದದೆ ಉದ್ಧರಿಸು|೩|

ರಾಮಚಂದ್ರನ ದೂತ ಸೌಮಿತ್ರಿ ಪ್ರಾಣದಾತ
ರೋಮರೋಮ ಕೋಟಿ ಕಾಮ ಸಂಹಾರನೇ
ಭೂಮಂಡಲಧರನ ಬೀಮಸೇನ
ಭೀಮ ರಿಪು ಗಂಟಲಗಾಣ ತಾಮಸ ಜ್ಞಾನವಳಿ
ನೀ ಮುಂದೆ ಬಂದು ಸುಳಿ ಶ್ರೀಮದಾನಂದತೀರ್ಥ|೪|

ಶ್ರೀ ಸಪುತ ಕುಜನರ ಭಾಷ್ಯ ಮುರಿದ ಧೀರ
ಭಾಸುತ ಕೀರ್ತಿಹಾರಾ ದೋಷರಾಶಿ ದೂರ
ಹ್ರಾಸವಿಲ್ಲದ ಮಹಿಮ ಶ್ರೀಶ ವಿಜಯವಿಠಲನ್ನ
ದಾಸರೊಳಧಿಕ ನಿನ್ನ ಲೇಶವಾದರು ಬಿಡೆ
ನಾ ಸರ್ವಥಾ ಕರೆ ತೋಷದಲಿಡುವುದೆನ್ನ|೫|

---

ಗುಣವಾಯಿತೆನ್ನ ಭವರೋಗ
ಕೃಷ್ಣನೆಂಬ ವೈದ್ಯನು ದೊರಕಿದನು
ಗುಣವಾಗುವವರಿಗೆ ಎಣೆಯಿಲ್ಲ
ಗುಣವಂತರಾಗುವರು ಭವದೆಲ್ಲ ||ಪ||

ಸಂತತ ಹರಿಭಕ್ತಿಯನು ಪಾನ
ಸಂತತ ಗುರುಭಕ್ತಿ ಮರುಪಾನ
ಸಂತತ ಈಶ್ವರನ ಕಠಿನ ಪಥ್ಯ
ಸಂತತ ಕೀರ್ತನ ಉಷ್ಣೋದಕ ||

ಚಂದ್ರೋದಯ ಉಂಟು ಈತನಲ್ಲಿ
ಚಿಂತಾಮಣಿಯುಂಟು ಈತನಲ್ಲಿ
ಸಂಚಿಯೊಳಗೆ ತುಂಬ ಮಾತ್ರೆಗಳುಂಟು
ಚೆನ್ನಾಗಿ ಗುಣ ಮಾಡುವನೀತ ||

ಗುರು ಸ್ಮರಣೆಯು ಶುಂಠಿಮೆಣಸು
ಹರಿದಿವ್ಯನಾಮವು ಸಾರನ್ನ
ಗುರುಪಾದಸೇವೆಯು ಸಿಹಿಸಾರು
ಹರಿಪಾದೋದಕವೆ ಘೃತವು ||

ಸಹಸ್ರನಾಮದಿ ತಾ ವಂದ್ಯ
ಸಕಲ ಸ್ವತಂತ್ರಕೆ ತಾ ಬಾಧ್ಯ
ಹರಿ ಸರ್ವೋತ್ತಮನೆಂಬ ವೈದ್ಯ

ಪುರಂದರವಿಠಲನೆ ನಿರವದ್ಯ ||

---------------------------------

ಅಂಜರು ಹರಿಭಟರು ದುರಿತಾರಿ
ಗಂಜರು ಹರಿಭಟರು
ಮಂಜಿನ ದಂಡೋಡಿಪ ಮೂಡಣ
ಕಂಜಸಖನ ಪೋಲ್ವವರು||ಪ||

ಅಗ್ಗಳಿಕೆಯೈಗಣೆಯನ ಬಲದಲಿ
ಮುಗ್ಗದೆ ಕುಲಿಶೆದೆಯಲ್ಲಿ ವೈ
ರಾಗ್ಯಸ್ತ್ರದಿ ಈರೈದಾಳಾಣ್ಮನ
ಕುಗ್ಗಿಸಿ ಸೆರೆ ತರುವವರು|೧|

ಮೂರರಾಯುಧ ಹತಿಭಯ ಜರಿದು
ವಾರಣ ನಾಕೆರಡಿರಿದು ಶೃಂ
ಗಾರದ ರಾಹುತರೆಂಟರ ಸದೆವರು
ವೀರ ಹರಿ ಧ್ವನಿಯವರು|೨|

ಎರಡೊಂಬತ್ತು ನಾದಿಕಾಭೇರಿ
ಎರಡು ಕಹಳೆಯ ಚೀರಿ
ಸರಕು ಮಾಡಿ ನವಕಲಿ ಸಂಜಿತರು
ಹರಿ ಮಂಡಿತ ನವರಥರು|೩|

ಒಂದೆ ನಿಷ್ಠೆಯ ರಣಧ್ವಜ ಮೇರೆಗೆ
ಹಿಂದಾಗದೆ ಮುಂದಾಗಿ
ಒಂದಿಪ್ಪತ್ತರಿ ವ್ಯೂಹ ಕೆಡಹುವರು
ಕುಂದದ ಧೃತಿ ಮತಿಯವರು|೪|

ಹಂಗಿನ ಸ್ವರ್ಗವ ಸೂರ್ಯಾಡುವರು
ಡಂಗುರ ಹೊಯ್ಯುವ ಮಹಿಮರು
ರಂಗ ಪ್ರಸನ್ನೆಂಕಟಪತಿ ಭಟರು
ಮಂಗಳಪದ ಲಂಪಟರು|೫|

----------------------------------------------------

ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಬಲ್ಲವರು ಪೇಳಿ ಹರಿಭಕ್ತರಾದವರು||ಪ||

ಶೀಲವನು ಕೈಕೊಂಡು ನಡೆಸದಾತನೆ ಹೊಲೆಯ
ಹೇಳಿದ ಶಾಸ್ತ್ರವನು ತಿಳಿಯದಿದ್ದವ ಹೊಲೆಯ
ಆಳಾಗಿ ಅರಸನಿಗೆ ಮಣಿಯದಾತನೆ ಹೊಲೆಯ

ಸೂಳೆಯನು ಕಾಮಿಸುವ ಶುದ್ಧ ಹೊಲೆಯ|೧|

ಇದ್ದು ದಾನ ಧರ್ಮವನು ಮಾಡದಿದ್ದವ ಹೊಲೆಯ
ಕದ್ದು ತನ್ನ ಒಡಲ ಹೊರೆಯುವವ ಹೊಲೆಯ
ಬದ್ಧವಿಲ್ಲದ ನುಡಿಗಳಾಡಿ ತಪ್ಪುವ ಹೊಲೆಯ
ಮದ್ದಿಕ್ಕಿ ಕೊಲ್ಲುವವ ಮರಳ ಹೊಲೆಯ|೨|

ಆಶೆಯಿಂದಲಿ ಬಹಳ ದೋಷ ಮಾಡುವ ಹೊಲೆಯ
ಲೇಸು ಹೊಲ್ಲೆಹವನ್ನು ತಿಳಿದವ ಹೊಲೆಯ
ಮೋಸವನು ಮಾಡಿನ್ನು ಪ್ರಾಣಕಳೆವನೆ ಹೊಲೆಯ
ಹುಸಿಯಾಡುವನೊಬ್ಬ ಹುಚ್ಚ ಹೊಲೆಯ |೩|

ಉಂಡ ಮನೆಗೆರಡು ಯೋಚಿಸುವಾತನೆ ಹೊಲೆಯ
ಗಂಡ ಹೆಂಡಿರೊಳು ಭೇಧವಿಕ್ಕುವನೆ ಹೊಲೆಯ
ಕೊಂಡೆಯವ ಹೇಳಿ ತಾ ತಿರುಗುವಾತನೇ ಹೊಲೆಯ
ಹೆಂಡತಿಯ ನುಡಿಕೇಳಿ ತಾಯಿ ತಾ ಬಿಡುವವನೇ ಹೊಲೆಯ|೪|

ಅರಿತು ಆಚಾರವನು ಮಾಡದಿದ್ದವ ಹೊಲೆಯ
ಪರಸತಿಯ ಮನವಳಕುವಾತನೆ ಹೊಲೆಯ
ಗುರುಹಿರಿಯರನ್ನು ಕಂಡು ಎರಗದಾತನೆ ಹೊಲೆಯ
ಪುರಂದರವಿಠಲನ್ನ ನೆನೆಯದವ ಶುದ್ಧ ಹೊಲೆಯ |೫|

---

ಅಕ್ಕ ನಂದಗೋಪನ ಅರಮನೆಯೊಳಗೊಬ್ಬ
ಅಕ್ರೂರ ಬಂದನಂತೆ||ಪ||

ಹೊಕ್ಕು ಬಳಕೆಯಿಲ್ಲ ಹೊಸಬನು ಇವನಂತೆ
ಇಕ್ಕೋ ಬಾಗಿಲ ಮುಂದೆ ಈಗ ರಥವ ಕಂಡೆ|ಅ.ಪ|

ಮಥು(ದು)ರಾ ಪಟ್ಟಣವಂತೆ ಮಾವನ ಮನೆಯಂತೆ
ನದಿಯ ದಾಟಲುಬೇಕಂತೆ
ಎದುರು ಅರಿವಿಲ್ಲದಂತೆ ಏನೆಂಬೆ ಏಣಾಕ್ಷಿ
ಉದಯದಿ ಪಯಣವಂತೆ|೧|

ಒಳ್ಳೆ ವೇಳೆಗಳಂತೆ ಬಿಲ್ಲುಹಬ್ಬಗಳಂತೆ
ಎಲ್ಲಾ ಬೀದಿ ಸಿಂಗರವಂತೆ
ಮಲ್ಲರ ಕೂಟವಂತೆ ಮತ್ತೆ ಕಾಳಗವಂತೆ
ಅಲ್ಲೆ ತಾಯ್ತಂದೆಗಳ ಕಾಲಿಗೆ ನಿಗಳವಂತೆ|೨|

ಮತ್ತೆ ಪಾಂಡವರಂತೆ ಮೋಹದ ಸೋದರರಂತೆ

ಅತ್ತೆಯ ಮಕ್ಕಳಂತೆ
ಸುತ್ತ ಶತ್ರುಗಳಂತೆ ಸಕಲ ಕಾರ್ಯಗಳಂತೆ
ಚಿತ್ತಜನಯ್ಯನ ಚಿತ್ತ ಎರಡಾಯ್ತಂತೆ|೩|

ಅಲ್ಲಿ ಪುಟ್ಟಿದನಂತೆ ಅರಸನಳಿಯನಂತೆ
ಇಲ್ಲಿಗೆ ಬಂದನಂತೆ
ಕಳ್ಳಕಪಟನಂತೆ ಎಂದಿಗೂ ಹೀಗಂತೆ
ನಿಲ್ಲದೆ ಯಶೋದೆಗೆ ಕಣ್ಣ ನೀರಂತೆ|೪|

ತಾಳಲಾರೆವು ನಾವು ಪುರಂದರವಿಠಲನ
ಕಾಣದೆ ನಿಲಲಾರೆವೆ
ಕಾಲಲೊಂದಾಗಿ ಕಾಮಿನಿಯರು ಕೂಡಿ
ಆಲಸ್ಯವಿಲ್ಲದೆ ಆಣೆಯಿಡುವ ಬನ್ನಿ|೫|

---

ಗೆದ್ದೆಯೊ ಹನುಮಂತಾ ಅಸುರರ
ಒದ್ದೆಯೊ ಬಲವಂತಾ||ಪ||

ಬದ್ಧಾಂಜಲಿಯಿಂದ ರಘುಪತಿ ಪಾದವ
ಹೃದ್ಯದಿ ಭಜನೆ ಮಾಡುವ ಬುದ್ಧಿವಂತ|ಅ.ಪ|

ಅಂಜನೀಸುತನೀತ ಲಂಕಾಪುರದಿ ಅಕ್ಷಯನ ಕೊಂದಾತ
ಕಂಜಾಕ್ಷಿ ಸೀತೆಯ ಕಂಡು ಮುದ್ರಿಕೆಯಿತ್ತು
ಮಂಜುಳವಾರೆ(ರ್ತೆ)ಯ ತಂದ ರಾಮನ ದೂತ|೧|

ಈರೇಳು ಜಗದೊಳಗೆ ಇನ್ನು ಮತ್ತೆ ಯಾರು ಸರಿಯೊ ನಿನಗೆ
ವೀರ ಮಹಾಬಲ ಶೂರ ಪರಾಕ್ರಮ
ಧೀರ ಸಮೀರ ಉದಾರ ಗಂಭೀರ|೨|

ವಾಂಛಿತ ಫಲವೀವನಾದ ಮುಖ್ಯ ಪ್ರಾಣ ಮಹಾನುಭಾವ
ಕಿಂಚಿತ್ತು ಕಷ್ಟವ ಪಡಲೀಸ ಭಕ್ತರ್ಗೆ
ಪಾಂಚಜನ್ಯ ಪುರಂದರವಿಠಲದಾಸ|೩|

---

Courtesy-Haridasa Sahithya-Facebook - www.vijayadasaru.net